(d) It is for Local bodies to expedite the donation amount for starting the construction of the building.

(e) The question does not arise at this stage.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರ್‌ನಲ್ಲಿ ಒಂದು ಸಂಯುಕ್ತ ಔಷಧಾಲಯವನ್ನು ಕಟ್ಟುವುದಕ್ಕಾಗಿ ನಾವು ಈಗಾಗಲೇ ೬೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈ ವಿಚಾರದಲ್ಲಿ ೧೯೬೫ನೇ ಇಸವಿಯಲ್ಲಿ ಲೋಕೋಪಯೋಗಿ ಇಲಾಖೆಯವರು ಒಂದು ಅಂದಾಜನ್ನು ತಯಾರು ಮಾಡಿದ್ದಾರೆ. ಅದರಂತೆ ಆಗ ೬೦ ಸಾವಿರ ಇತ್ತು, ಆಮೇಲೆ ೬೫ ಸಾವಿರ ಆಯಿತು, ಈಗ ೭೫ ಸಾವಿರ ಆಗಿದೆ. ಹಣವನ್ನೆಲ್ಲಾ ಒಂದೇ ಸಾರಿ ಕೊಟ್ಟುಬಿಟ್ಟಿದ್ದರೆ ಈ ರೀತಿ ಬದಲಾವಣೆಯಾಗುವುದಕ್ಕೆ ಕಾರಣ ಇರಲಿಲ್ಲ. ಆದರೂ ಈಗ ಬ್ಯಾಲೆನ್ಸ್ ಹಣ ಏನಿದೆ ಅದನ್ನು ಟೌನ್ ಪಂಚಾಯಿತಿಯವರಿಂದ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಂದ ಕೊಡಿಸಿದರೆ ಮುಂದಿನ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಇದು ೧೦ ವರ್ಷಗಳಿಂದ ಇರತಕ್ಕಂಥ ವ್ಯವಹಾರ, ಈಗಾಗಲೇ ಅವರು ೬೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರ ಮೇಲಿನ ಬಡ್ಡಿಗಾಗಿ ಅವರಿಂದ ೧೫ ಸಾವಿರ ರೂಪಾಯಿಗಳ ಮೇಲೆ ಹೋಗುತ್ತಿದೆ. ಆದ್ದರಿಂದ ಟೌನ್ ಪಂಚಾಯತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಉಳಿದ ಹಣವನ್ನು ಕೊಡತಕ್ಕಂಥ ವಾಟ್ಟದಲ್ಲಿ ಈಗ ಇಲ್ಲ. ಅದಕ್ಕೋಸ್ಕರ ಸರ್ಕಾರದವರಿಂದ ಆ ಹಣವನ್ನು ಕೊಡಿಸುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಂ ಮಲ್ಲಪ್ಪ.—ಈ ವಿಚಾರದಲ್ಲಿ ಟೌನ್ ಪಂಚಾಯತಿಯವರು ಹಾಗೂ ತಾಲ್ಲೂಕು ಬೋರ್ಡ್‌ನವರು ಒಂದು ತೀರ್ಮಾನ ಮಾಡಿ, ಹಣ ಕೊಡುವುದಕ್ಕೆ ಒಪ್ಪಿಕೊಂಡು ಒಂದು ರೆಸೆಲ್ಯೂಷನ್ ಕಳಿಸಿಕೊಟ್ಟಮೇಲೆ ಕೂಡ ಅವರು ಅವರ ಭಾಗದ ಕರ್ತವ್ಯವನ್ನು ಮಾಡದೆ ಇರುವುದರಿಂದ ಇದರಲ್ಲಿ ಲೋಪವಾಗಿದೆ, ಇದು ಸರ್ಕಾರದ್ದಲ್ಲ. ಉಳಿದ ಹಣವನ್ನು ಆದಷ್ಟು ಬೇಗ ಅವರು ಕಟ್ಟಿದರೆ ಈ ಬಗ್ಗೆ ಸರ್ಕಾರ ಇವಕ್ಕೆ ಮಂಜೂರಾತಿ ಕೊಟ್ಟು ಮುಂದಿನ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಈಗ ನಮಗೆ ಅವಶ್ಯಕವಾಗಿ ಒಂದು ಎಕ್ಸ್‌ರೇ ಪ್ಲಾಂಟ್ ಬೇಕಾಗಿದೆ. ಇದಕ್ಕಾಗಿ ೧೫ ಸಾವಿರ ರೂಪಾಯಿಗಳನ್ನು ಸರ್ಕಾರದವಂದ ಕೊಡಿಸುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರಾ ? ಎಕ್ಸ್‌ರೇ ಪ್ಲಾಂಟನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಇದು ೧೨ ಹಾಸಿಗೆಗಳ ಒಂದು ಸಂಯುಕ್ತ ಹಾಸ್ಪಿಟಲ್. ಕೂಸು ಹುಟ್ಟುವುದಕ್ಕಿಂತ ಮೊದಲೇ ಕುಲಾವಿ ಹೊಲೆಸಬೇಕು ಎಂದರೆ ಅದು ಆಗುವುದಿಲ್ಲ. ಕಟ್ಟಡ ನಿರ್ಮಾಣಕ್ಕಾಗಿ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ಮೊದಲು ಹಣ ಕೊಡಿ. ಕಟ್ಟಡ ಆದಮೇಲೆ ಎಲ್ಲಾ ವ್ಯವಸ್ಥೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

Rural Water Supply Schemes in Gulbarga District.

265 SRI GOVIND P. VADEYARAJ (Kamalapur).—Will the Minister for Rural Development and Panchayat Raj be pleased to state :—

(a) the number of villages with and without drinking water facilities in Gulbarga District (Taluk-wise figures may please be furnished) ;

---

† Indicate that remarks or speeches have not been revised by the member concerned.

(b) the number of villages wherein the Rural Water Supply Schemes are under progress (Taluk-wise figures may please be furnished) ;

(c) when the Government proposes to complete the water supply schemes in view of serious shortage of drinking water ;

(d) whether it has come to the notice of the Government that many of the completed projects are not functioning ;

(e) the remedial measures the Government are taking to see that the Rural Water Supply Schemes function properly ;

(f) when the Government propose to supply drinking water to all the villages in Gulbarga District ;

(g) the total amount of grant given by the Government of India during 1977-78 and 1978-79 to the Karnataka State for the Rural Water Supply Schemes ?

SRI K PRABHAKAR (Minister for Rural Development and Panchayat Raj).—

(a) :—

Sl. No.	Name of the Taluk	No. of villages with D. W. facilities	No. of villages without D.W. facilities
1.	Afzalpur	90	...
2.	Aland	113	16
3.	Chincholi	143	2
4.	Chitapur	121	1
5.	Gulbarga	126	18
6.	Jewargi	158	...
7.	Sedam	105	6
8.	Shahapur	158	1
9.	Shorapur	180	6
10.	Yadgir	142	...
	TOTAL ...	1336	50

(b) :—

Sl. No.	Name of the Taluk	No. of piped water supply schemes under progress
1.	Afzalpur	7
2.	Aland	4
3.	Chincholi	14
4.	Chitapur	10
5.	Gulbarga	9
6.	Jewargi	5
7.	Sedam	3
8.	Shahapur	8
9.	Shorapur	3
10.	Yadgir	5
	TOTAL ...	68

(c) Out of 68 water supply schemes pending completion, 64 schemes have been targetted to be completed during 1978-79 and the remaining 4 schemes are to be completed during 1979-80.

(d) Yes.

(e) The Deputy Commissioners have been instructed to see that the electricity dues are recovered from the V.P.Cs. which have failed to deposit the electricity charges out of 30 per cent of L.R. grants so that such schemes may be recommissioned. In regard to the Water Supply Schemes which have become defunct due to machinery troubles, the Panchayats have to pay the 10 per cent of the cost of the machineries in respect of old schemes so that the PHE Department can take up the repairs. In other cases the PHE Department can take up the repairs to the Water Supply Schemes in accordance with the instructions issued in G. O. No. RDC 543 VRW 75 dated 30th August 1976.

(f) The Government proposes to provide drinking water facilities to all the remaining problematic villages as per the list identified by the Public Health Engineering Department during 1974 and by the Block Development Officers during 1976, by the end of 1979-80 by providing borewells.

(g) The total amount given during 1977-78 by the Government of India under Accelerated Rural Water Supply Programme was Rs. 140 lakhs towards the works and Rs. 2.30 lakhs towards the

establishment charges of a monitoring cell and the investigation units. During 1978-79, the Government of India have indicated that they would release Rs. 140 lakhs only towards the Accelerated Rural Water Supply Programme

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 'ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವ ಗ್ರಾಮಗಳ ಸಂಖ್ಯೆ ೫೦' ಎಂದು ಮಾನ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಮತ್ತು ಈ ಕುಡಿಯುವ ನೀರಿನ ಯೋಜನೆಯಲ್ಲಿ 'ಪ್ರಗತಿಯಲ್ಲಿರುವ ಕೊಳವೆ ನೀರಿನ ಸರಬರಾಜು ಯೋಜನೆಗಳ ಸಂಖ್ಯೆ ೬೮' ಎಂದು ಉತ್ತರ ಹೇಳಿದ್ದಾರೆ. ಇದು ಒಂದಕ್ಕೊಂದು ವಿರೋಧಾಭಾಸದ ಉತ್ತರವಾಗಿದೆ. ಕೆಲಸ ನಡೆದಿರುವ ಯೋಜನೆಗಳ ಸಂಖ್ಯೆ ೬೮ ಎಂದು ಹೇಳುತ್ತಾರೆ; ಕುಡಿಯುವ ನೀರು ಇಲ್ಲದೇ ಇರುವ ಗ್ರಾಮಗಳ ಸಂಖ್ಯೆ ಎಷ್ಟು ಎಂದರೆ ೫೦ ಎಂದು ಹೇಳಿದ್ದಾರೆ. ಈ ಎರಡರಲ್ಲಿ ಯಾವುದು ಸತ್ಯ ಎಂಬುದನ್ನು ಹೇಳುತ್ತೀರಾ?

† ಶ್ರೀ ಕೆ. ಪ್ರಭಾಕರ್.—ಎರಡೂ ಸತ್ಯವಾಗಿದೆ,

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಈ ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರು ಇಲ್ಲದಂಥ ಗ್ರಾಮಗಳ ಸಂಖ್ಯೆ ೫೦ ಎಂದು ಹೇಳಿದ್ದಾರೆ; ಮತ್ತು ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆಯ ಕೆಲಸ ನಡೆದಿದೆಯೋ ಅದರ ಸಂಖ್ಯೆ ೬೮ ಎಂದು ಉತ್ತರ ಹೇಳಿದ್ದಾರೆ. ಈ ವಿಚಾರದಲ್ಲಿ ಆಯಾ ಗ್ರಾಮದಲ್ಲಿ ನಡೆದಿರುವ ಕೆಲಸದ ಸಂಖ್ಯೆ ೬೮ ಎಂದು ಹೇಳುವಾಗ, ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವ ಗ್ರಾಮಗಳ ಸಂಖ್ಯೆ ೫೦ ಎಂದು ಹೇಳಿದರೆ ಅದು ಹೇಗಾಗುತ್ತದೆ? ಈ ಎರಡೂ ಹೇಗೆ ಸತ್ಯವಾಗುವುದಕ್ಕೆ ಸಾಧ್ಯವಿದೆ?

ಶ್ರೀ ಕೆ. ಪ್ರಭಾಕರ್.—ಈ ವಿಚಾರದಲ್ಲಿ ಎರಡೂ ಸತ್ಯವಾಗಿದೆ. ಇದರಲ್ಲಿ ಏನಾಗಿದೆ ಎಂದರೆ ಈ ಬೋರ್‌ವೆಲ್‌ಗಳನ್ನು ಹಾಕುವಾಗ ಜನಸಂಖ್ಯೆ ಪ್ರಕಾರವಾಗಿ ದೊಡ್ಡ ದೊಡ್ಡ ಊರುಗಳಲ್ಲಿ ಒಂದೊಂದು ಸಲ ೧,೨,೩ ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಪದ್ಧತಿ ಉಂಟು. ಒಂದು ಗ್ರಾಮಕ್ಕೆ ೨,೩ ಬೋರ್‌ವೆಲ್‌ಗಳನ್ನು ಹಾಕಿರುವ ಕಡೆ ಲೆಕ್ಕವನ್ನು ತೆಗೆದುಕೊಂಡರೆ ಅದು ೧೫೫ ಕ್ಕೂ ಜಾಸ್ತಿ ಇದೆ. ಈ ರೂಪದಲ್ಲಿ ಎರಡೂ ಸತ್ಯವಾಗಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಬೋರ್‌ವೆಲ್‌ಗಳ ವಿಚಾರ ಕೊನೆಗೆ ಬರುತ್ತದೆ. ಈ ಎನ್. ಆರ್. ಡಬ್ಲ್ಯು.ಎಸ್ ಸ್ಕೀಂ ಪ್ರಕಾರ ೬೮ ಗ್ರಾಮಗಳಲ್ಲಿ ಈ ಕೆಲಸ ನಡೆದಿದೆಯೆಂದು ಹೇಳಿದ್ದೀರಿ. ಅಂದರೆ ೬೮ ಗ್ರಾಮಗಳಲ್ಲಿ ಕುಡಿಯುವ ನೀರು ಇಲ್ಲ ಎಂದು ಅರ್ಥವಾಯಿತು. ಇದಕ್ಕೆ ಬೇರೆ ವ್ಯವಸ್ಥೆ ಇಲ್ಲ. ತಾವು ಎನ್.ಆರ್. ಡಬ್ಲ್ಯು.ಎಸ್.ಸ್ಕೀಂನಲ್ಲಿ ಈಗ ಕೆಲಸ ಮಾಡಿಸುತ್ತಿದ್ದೀರಿ. ಈಗ ಕುಡಿಯುವ ನೀರು ಇಲ್ಲದೇ ಇರುವ ಗ್ರಾಮಗಳ ಸಂಖ್ಯೆ ೫೦ ಎಂದು ಹೇಳಿದ್ದೀರಿ. ಇದು ಹೇಗೆ?

ಶ್ರೀ ಕೆ. ಪ್ರಭಾಕರ್.—ಇದು ಬೇರೆ ವ್ಯವಸ್ಥೆ ಮಾಡುವ ಪ್ರಶ್ನೆಯಲ್ಲ; ಇಂತಹ ಸಂದರ್ಭದಲ್ಲಿ ನೀರು ಇಲ್ಲದೇ ಇರುವ ಗ್ರಾಮಗಳ ಸಂಖ್ಯೆ ೫೦ ಎಂದು ಹೇಳಿದರೆ, ಮತ್ತು ಎಲ್ಲೆಲ್ಲಿ ಅಂತಹ ಕೆಲಸ ಕಾರ್ಯಗಳು ಪ್ರಗತಿಯಲ್ಲಿವೆಯೋ ಈ ಒಂದು ಸಂಖ್ಯೆ ೧೮ ಎಂದು ಹೇಳಿದರೆ ನಾನು ಮೊದಲೇ ಹೇಳಿದ ಹಾಗೆ ಒಂದೊಂದು ಕಡೆ ೨-೩, ಬೋರ್‌ವೆಲ್‌ಗಳ ವ್ಯವಸ್ಥೆ ಮಾಡಿರುವುದು ಉಂಟು; ಹೀಗೆ ಈ ಒಂದು ಸಂಖ್ಯೆ ಹೆಚ್ಚುತ್ತಿದೆ ಎಂದು ಹೇಳುತ್ತೇನೆ. ಒಂದು ವೇಳೆ ತಾವು ಇದು ಸಂಶಯಾತ್ಮಕವಾಗಿ ಇದೆಯೆಂದು ಹೇಳಿದರೆ ಈ ವಿಚಾರದಲ್ಲಿ ಪರೀಕ್ಷೆ ಮಾಡಿಸುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ ಉತ್ತರದಲ್ಲಿ ೬೮ ಗ್ರಾಮಗಳಲ್ಲಿ ಕೆಲಸ ನಡೆದಿದೆಂದು ಹೇಳಿದ್ದೀರಿ, ಅವುಗಳನ್ನು ೧೯೭೮-೭೯ ರಲ್ಲಿ ಮುಗಿಸಲು ಟಾರ್ಗೆಟ್ ಇಟ್ಟುಕೊಂಡಿದ್ದೇವೆಂದು ತಿಳಿಸಿ ೧೯೭೯-೮೦ ರಲ್ಲಿ ಉಳಿಯುವ ೪ ಸ್ಕೀಂಗಳನ್ನು ಮುಗಿಸಬೇಕೆಂದು ಪ್ಲಾನ್ ಹಾಕಿಕೊಂಡಿರುವುದಾಗಿ ತಿಳಿಸಿದ್ದೀರಿ ಆದರೆ ಇಲ್ಲಿಯವರೆಗೆ ಯಾವುದೂ ಕಂಪ್ಲೀಟ್ ಆಗಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಪ್ರಭಾಕರ್.—ಅಷ್ಟು ಮಾಡಬೇಕೆಂದು ಒಂದು ಟಾರ್ಗೆಟ್ ಹಾಕಿಕೊಂಡಿದ್ದೇವೆ ಅಲ್ಲಿ ಯಾವ ವರ್ಕ್ ಆಗಿಲ್ಲವೆಂದು ತಾವು ಹೇಳುವುದಾದರೆ ಅವು ಎಲ್ಲವನ್ನೂ ಪೂರ್ಣ ಮಾಡುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ, ಎಲ್ ಆರ್. ಗ್ರಾಂಟ್‌ನಿಂದ ೩೦ ಪರ್ಸೆಂಟ್ ಕೊಟ್ಟು ಅದನ್ನು ರೆಕವರಿ ಮಾಡಬೇಕೆಂಬುದಾಗಿ ತಿಳಿಸಿದ್ದೀರಿ ಮತ್ತೆ ಇನ್ನು ೧೦ ಪರ್ಸೆಂಟ್ ಪಂಚಾಯಿತಿಯವರು ಕೊಡಬೇಕು ಅದರ ಅವರಿಗೆ ಆಷ್ಟು ಕಟ್ಟುವುದಕ್ಕೂ ಶಕ್ತಿ ಇಲ್ಲ ಇದು ಮೊದಲನೆಯದು. ಎರಡನೆಯದು ಪೆಪ್ಯುಟಿ ಕಮಿಷನರ್‌ರವರು ಏನು ರೆಕವರಿ ಮಾಡಿ ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಆದುದರಿಂದ ತಾವು ಅಲ್ಲಿಗೆ ಖುದ್ದಾಗಿ ಬಂದು ನೋಡಿ ಅಲ್ಲಿ ಕೆಲಸ ತ್ವರಿತಗೊಳಿಸುವಂತೆ ವಿಚಾರಿಸು ಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ಖುದ್ದಾಗಿ ಬರಲಿ ಬಾರದೇ ಇರಲಿ ಅವುಗಳು ಆಗುವ ಹಾಗೆ ವಿಚಾರಿಸು ಮಾಡುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಖುದ್ದಾಗಿ ಬರಬೇಕೆಂದು ನಾನಕ್ಕೆ ಹೇಳುತ್ತಿದ್ದೇನೆಂದರೆ ಇನ್ನು ಎರಡು ವರ್ಷವಾದರೂ ಇದೇ ಉತ್ತರವನ್ನು ಮಾನ್ಯ ಮಂತ್ರಿಗಳವರು ಕೊಡುತ್ತಾರೆ ಅದಕ್ಕೆ ಅವರು ಖುದ್ದಾಗಿ ಬಂದರೆ ಅಲ್ಲಿಯ ಜನಗಳ ಕಷ್ಟವೇನು ಅದರೆಲ್ಲಿಯೂ ಬೇಸಿಗೆ ಕಾಲದಲ್ಲಿ ಅಲ್ಲಿ ಕುಡಿಯುವ ನೀರಿಗೆ ಎಷ್ಟು ತೊಂದರೆ ಇದೆ ಎಂಬುದು ಅವರಿಗೆ ವೇದ್ಯವಾಗುತ್ತದೆ ಅದಕ್ಕೇ ನಾನು ಖುದ್ದಾಗಿ ಬಂದು ನೋಡಲಿ ಎಂದು ಒತ್ತಾಯ ಮಾಡುತ್ತಿದ್ದೇನೆ ಅಷ್ಟೇ.

ಶ್ರೀ ಕೆ. ಪ್ರಭಾಕರ್.—ಖುದ್ದಾಗಿ ಬಂದು ನೋಡಿ ವ್ಯವಸ್ಥೆ ಮಾಡುತ್ತೇನೆ.

SRI PRABHAKAR TELKAR.—I want to just bring to the notice of the Government, that there are several NRW schemes which have been completed but in the last 3-4 years, they are not at all working. For example in Bijapur Taluk, Kalaji is there. Several such schemes are there which have been completed but no action is taken. Repeatedly, this has been taken up in the Assembly as well as in the District Development Council meetings. Every time you are repeatedly saying this but no action is taken. What steps is government going to take? So much amount is wasted but no action is taken.

ಶ್ರೀ ಕೆ ಪ್ರಭಾಕರ್.—ನೀವು ಹೇಳುವ ಕಷ್ಟದಲ್ಲಿ ಎರಡು ತರಹವಿದೆ, ಎರಡು ಭಾಗವಿದೆ. ಅದು ನಮ್ಮ ಗಮನಕ್ಕೆ ಬಂದಿದೆ. ಆ ಟ್ರಬಲ್ ಸ್ಪಾಟ್ ಏನಿದೆ ಆ ಬಂದು ಪಂಚಾಯಿತಿಗಳವರು ಕಟ್ಟಬೇಕಾಗಿರ ತಕ್ಕ ಹಣವೇನಿದೆ ಅದನ್ನು ಸರ್ಕಾರದವರು ಪೂರ್ತಿ ಕಟ್ಟಬೇಕು ಎನ್ನುವಕ್ಕಿದರ ಬಗ್ಗೆ ಆದೇಶ ಕೊಟ್ಟು ಆದನ್ನು ಇತ್ತೀಚೆಗೆ ನಿವಾರಣೆ ಮಾಡಿದ್ದೇವೆ ಇನ್ನು ಬರಬೇಕಾಗಿದೆ ಎಲ್ಲೆಲ್ಲಿ ಚಾರ್ಜ್‌ನ್ನು ಕಟ್ಟಿಲ್ಲ ಎನ್ನುವಕ್ಕವರು ಇದೆ. ಅದಕ್ಕೆ ಸರ್ಕಾರದಿಂದ ಅಷ್ಟೆನಾಮೆಂಟ್ ಗ್ರಾಂಟ್‌ನ್ನು ಕೊಟ್ಟು ಎಲ್ಲೆಲ್ಲಿ ಹಣದ ಕೊರತೆ ಇದೆಯೋ ಅಲ್ಲಿಗೆಲ್ಲಾ ಆದ್ಯತೆ ಕೊಟ್ಟು ಹಣವನ್ನು ಕಟ್ಟು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಈ ಎರಡೂ ವಿಧಾನಗಳಿಂದ ಎಲ್ಲ ಕಷ್ಟ ನಿವಾರಣೆಯಾಗುವುದಕ್ಕೆ ಸಾಧ್ಯವನ್ನುವುದು ವೇದ್ಯವಾಗುತ್ತದೆ.

Construction of Leprosarium outside Bijapur City.

431 SRI S.H.S. BAKSHI (Bijapur).—Will the Minister for Health and Family Welfare be pleased to state.

(*a*) whether it has come to the notice of Government that the percentage of Leprosy in Bijapur is 2 per cent and 0.5 per cent and that it has reached the alarming point;

(*b*) if so, the reasons for not taking any preventive measures;